

# ಚೆಸ್ ಲೋಕ ಬೆಳಗಿದ ತಾರೆ ಸ್ಪಾಸ್ಕಿ

ಬೋರಿಸ್ ಸ್ಪಾಸ್ಕಿ (ಜ. 30, 1937 – ಫೆ. 27, 2025) ಚೆಸ್ ಜಗತ್ತಿನ ದಂತಕಥೆಗಳಲ್ಲೊಬ್ಬರು. ರಷ್ಯಾದ ಚದುರಂಗದ ಪ್ರಭಾವಳಿಯಲ್ಲಿ ಎದ್ದುಕಾಣುವ ಹೆಸರು ಅವರದು. ಅಸಾಧಾರಣ ನಡೆಗಳಿಂದ ಎದುರಾಳಿಗಳ ಕಂಗೆಡಿಸುತ್ತಿದ್ದ ಸ್ಪಾಸ್ಕಿ, ತಮ್ಮ ನಿಲುವು – ವರ್ತನೆಗಳಿಂದೂ ಸುದ್ದಿಯಲ್ಲಿ ಇರುತ್ತಿದ್ದವರು.

■ ನಾಗೇಶ ಶೆಣೈ

ಆಗ ಸೋವಿಯತ್ ಒಕ್ಕೂಟ ಮತ್ತು ಅಮೆರಿಕ ನಡುವಣ ಶೀತಲ ಸಮರ ಉತ್ತುಂಗದಲ್ಲಿದ್ದ ಕಾಲ. ವಿಶ್ವ ಚೆಸ್‌ನಲ್ಲಿ ಸೋವಿಯತ್ ಒಕ್ಕೂಟ ಸುಮಾರು ಮೂರು ದಶಕಗಳಿಂದ ಉಕ್ಕಿನ ಹಿಡಿತ ಸಾಧಿಸಿತ್ತು. ಮಿಖೈಲ್ ಬೊತ್ವಿನಿಕ್, ಮಿಖೈಲ್ ತಾಲ್, ವ್ಯಾಸಿಲಿ ಸ್ಮಿಸ್ಲೋವ್, ಟಿಗ್ರಾನ್ ಪೆಟ್ರೊಸಿಯಾನ್ ಅಂಥ ಘಟಾನುಘಟಿಗಳ ಪರಂಪರೆಯಲ್ಲಿ ಸಾಗಿದ್ದ ಬೋರಿಸ್ ಸ್ಪಾಸ್ಕಿ 1972ರ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ತಮ್ಮ ಪಟ್ಟ ಉಳಿಸಿಕೊಳ್ಳಲು ಸಜ್ಜಾಗಿದ್ದರು. ಅದೇ ವೇಳೆಗೆ ಅಮೆರಿಕದ ರಾಬರ್ಟ್ ಜೇಮ್ಸ್ ಫಿಷರ್ (ಬಾಬಿ ಫಿಷರ್) ಅವರು ರಷ್ಯನ್ನರ ಪ್ರಾಬಲ್ಯಕ್ಕೆ ಸೆಡ್ಡು ಹೊಡೆಯಬಲ್ಲ ಪ್ರವರ್ಧಮಾನಕ್ಕೆ ಬಂದಿದ್ದರು.

ಅರ್ಜೆಂಟೀನಾದ ಬ್ಯೂನೊ ಏರ್ಸ್‌ನಲ್ಲಿ ಪೆಟ್ರೊಸಿಯಾನ್ ಅವರನ್ನು ಕ್ಯಾಂಡಿಡೇಟ್ಸ್ ಫೈನಲ್‌ನಲ್ಲಿ ಸೋಲಿಸಿದ್ದ ಫಿಷರ್ ಅರ್ಹವಾಗಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ತಲುಪಿದ್ದರು. ಹೀಗಾಗಿ ಸ್ಪಾಸ್ಕಿ– ಫಿಷರ್ ಈ ಹಣಾಹಣಿಯನ್ನು ಶೀತಲ ಸಮರದ ರೂಪಕದಂತೆ ಕಾಣಲಾಗಿತ್ತು. ಮಾಧ್ಯಮಗಳು ಈ ಫೈನಲ್ ಅನ್ನು 'ಶತಮಾನದ ಹಣಾಹಣಿ' ಎಂಬಂತೆ ಬಿಂಬಿಸಿದ್ದವು. ಫಿಷರ್ ಅವರ ಆರಂಭದ ವರಾತಗಳನ್ನು ಸಹಿಸಿಕೊಂಡ ಸ್ಪಾಸ್ಕಿ 21 ಆಟಗಳ ಫೈನಲ್‌ನಲ್ಲಿ ಸೋತರು. ಸೋವಿಯತ್ ಆಧಿಪತ್ಯ ಕೆಲವು ವರ್ಷ ಕೊನೆಗೊಂಡಿತು. ಫೈನಲ್ ಉದ್ದಕ್ಕೂ ಘನತೆಯಿಂದ ವರ್ತಿಸಿದ ಸ್ಪಾಸ್ಕಿ ಮೆಚ್ಚುಗೆಗೆ ಪಾತ್ರರಾದರು.

ಇತ್ತೀಚೆಗೆ ಮಾಸ್ಕೊದಲ್ಲಿ ನಿಧನರಾದ ಸ್ಪಾಸ್ಕಿ (88) ಹೆಸರು ನೆನಪಾಗುವುದು 1972ರ ಚಾಂಪಿಯನ್‌ಷಿಪ್ ಫೈನಲ್‌ನಿಂದ. 'ಚೆಸ್ ಲೋಕವನ್ನು ಬೆಳಗಿದ ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಸ್ಪಾಸ್ಕಿ ಒಬ್ಬರು' ಎಂದು ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ (ಫಿಡೆ) ಅವರಿಗೆ ಸಲ್ಲಿಸಿದ ನುಡಿನಮನದಲ್ಲಿ ಬಣ್ಣಿಸಿದೆ. ಸೋವಿಯತ್ ಆಟಗಾರರ ಶೈಲಿ ಕರಗತ ಮಾಡಿಕೊಂಡಿದ್ದ ಅವರು ಮಧ್ಯಮ ಹಂತದ ಆಟದಲ್ಲಿ ಪಾರಂಗತರಾಗಿದ್ದರು. ಎದುರಾಳಿಯ ಶೈಲಿಗೆ ತಕ್ಕಂತೆ ತಮ್ಮ ಆಟದ ತಂತ್ರಗಳನ್ನು ರೂಪಿಸಿಕೊಂಡು ಆಡುವುದು ಅವರಿಗೆ ಕರಗತವಾಗಿತ್ತು ಎಂದು ಚೆಸ್ ಪರಿಣತರು ವಿಶ್ಲೇಷಿಸಿದ್ದಾರೆ. ಅವರ ಆಟದ ಬಗ್ಗೆ ಹಲವು ಕೃತಿಗಳು ಬಂದಿವೆ. 1972ರ ಫೈನಲ್ ಬಗ್ಗೆ ಸಾಕ್ಷ್ಯಚಿತ್ರಗಳೂ ಸಹ. ಸೈದ್ಧಾಂತಿಕ (ಪೊಸಿಷನಲ್) ಮತ್ತು ತಂತ್ರ ಹೆಣೆಯುವ ಆಟ (ಟ್ಯಾಕ್ಟಿಕಲ್) – ಎರಡರಲ್ಲೂ ಅವರು ಪ್ರಬಲರಾಗಿದ್ದರು.

"ಒಂಬತ್ತು ವರ್ಷದವನಿರುವಾಗ ನಾನು ಟೂರ್ನಿಯೊಂದಲ್ಲಿ ವಿಜೇತನಾದಾಗ ನನಗೆ 'ಹಂಡ್ರೆಡ್ ಬೆಸ್ಟ್ ಗೇಮ್ಸ್ ಆಫ್ ಸ್ಪಾಸ್ಕಿ' ಎಂಬ ಪುಸ್ತಕವನ್ನು ಬಹುಮಾನವಾಗಿ ನೀಡಲಾಗಿತ್ತು" ಎಂದು ಭಾರತದ ತಾರೆ ವಿಶ್ವನಾಥನ್ ಆನಂದ್ ಇತ್ತೀಚೆಗೆ ನೆನಪಿಸಿಕೊಂಡಿದ್ದಾರೆ.

'ತನ್ನ ಎದುರಾಳಿಗಳ ವಿಭಿನ್ನ ಆಟದ ಶೈಲಿಗೆ ಹೊಂದಿಕೊಂಡು ಆಡುವ ಕೌಶಲದಲ್ಲೇ ಸ್ಪಾಸ್ಕಿ ಅವರ ಸಾಮರ್ಥ್ಯ ಅಡಗಿತ್ತು' ಎಂದಿದ್ದಾರೆ ಯುಗೊಸ್ಲಾವಿಯಾದ ಗ್ರ್ಯಾಂಡ್‌ಮಾಸ್ಟರ್ ಸ್ವೆಟೊಝುರ್ ಗ್ಲಿಗೊರಿಕ್.

ಜನ್ಮ ಸ್ಥಳ: ಲೆನಿನ್‌ಗ್ರಾಡ್ (ಈಗಿನ ಸೇಂಟ್ ಪೀಟರ್ಸ್‌ಬರ್ಗ್)
ಪ್ರತಿನಿಧಿಸಿದ ದೇಶಗಳು: ರಷ್ಯಾ, ಫ್ರಾನ್ಸ್
ವಿಶ್ವ ಚಾಂಪಿಯನ್: 1969–72
ಅತ್ಯುನ್ನತ ರೇಟಿಂಗ್: 2690 (ಜ. 1971)
ಅತ್ಯುನ್ನತ ಕ್ರಮಾಂಕ: 2 (ಜ. 1971)

## ಶತಮಾನದ ಪಂದ್ಯ

ಸ್ಪಾಸ್ಕಿ ಅವರು ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಮೂರು ಫೈನಲ್‌ಗಳಲ್ಲಿ ಆಡಿದ್ದಾರೆ. 1966ರ ಫೈನಲ್‌ನಲ್ಲಿ ಅವರು ಟಿಗ್ರಾನ್ ಪೆಟ್ರೊಸಿಯಾನ್ ಅವರಿಗೆ ಸೋತಿದ್ದರು. 1969ರಲ್ಲಿ ಇದೇ ಎದುರಾಳಿಯನ್ನು ಸೋಲಿಸಿ ಮೊದಲ ಬಾರಿ ವಿಶ್ವ